## ಕಥೆ

ಮೊದಲ ಪ್ರಶ್ನೆಗೆ ಉತ್ತರಿಸಿ ಇಡೀ ಸಭಾಂಗಣವನ್ನೇ ನಗೆಗಡಲಲ್ಲಿ ಕೆಡವಿದಳು. ಅದೊಂದು ಉತ್ತರದ ವಿನಹ ಬೇರೆಲ್ಲವೂ ಸರಿಸುಮಾರು ಗಂಡ ಉತ್ತರಿಸಿದ ರೀತಿಯಲ್ಲಿಯೇ ಉತ್ತರಿಸಿದಳು. ಗಂಡನ ಧನದಾಹ, ಭ್ರಷ್ಟತೆ, ಮುಗಿಯದ ವರದಕ್ಷಿಣೆಯ ಕಾಟಗಳನ್ನು ಮುಚ್ಚಿಹಾಕಿ ಮಾತನಾಡಿದಳು. ಗಂಡನು ಎಲ್ಲಿ ಯಾವ ರೀತಿಯ ಸುಳ್ಳು ಹೇಳಿರುತ್ತಾನೆ ಎಂಬುದು ಆಕೆಗೆ ಗೊತ್ತಿತ್ತು. ಸುಳ್ಳಿಗೆ ಮಾತ್ರ ದುಡ್ಡು ಗಿಟ್ಟಿಸುವ ತಾಕತ್ತಿದೆ, ನಿಜಕ್ಕೆ ನಾಮವೇ ಗತಿ ಎಂಬುದು ಅವಳ ಪ್ರಬಲ ನಂಬಿಕೆಯಾಗಿತ್ತು.

ಮೊದಲ ಜೋಡಿಯ ಪ್ರಶ್ನೋತ್ತರ ಮುಗಿಯುತ್ತಿದ್ದಂತೆ 'ಸಕತ್ ಸತಿಪತಿ', 'ಅಬ್ರಕಡಬ್ರ', 'ವೆಲಾಸಿಟಿ'ಗಳ ಜಾಹೀರಾತಿನ ಸುರಿಮಳೆಯಾಯ್ತು. ಸಮಯ ಸರಿಯುತ್ತಿತ್ತು. ಸ್ಪರ್ಧಾಳುಗಳು ಮುಂದಿನ ಸುತ್ತಿಗಾಗಿ ಚಡಪಡಿಸತೊಡಗಿದರು.

ಕಂಪ್ಯೂಟರ್ ಯಂತ್ರವು ಆದೇಶಿಸಿದ ಕೂಡಲೆ ಒಂದು ಜೋಡಿಯನ್ನು ಕುಡ್ಡೇಟಲ್ಲೊಂದು ಅಡ್ಡೇಟು ಎಂಬಂತೆ ಆಯ್ಕೆ ಮಾಡುತ್ತಿತ್ತು.

ಮೊದಲ ಜೋಡಿಗೆ ಪ್ರಶ್ನಿಸಿದಂತೆ 2 ಮತ್ತು 3ನೆಯ ದಂಪತಿಗಳಿಗೂ ಪ್ರಶ್ನಿಸಿ ಉತ್ತರ ಪಡೆಯಲಾಯಿತು. ವೇಷ ಭಾಷೆ ತಿಂಡಿ ತಿನಿಸು ರೀತಿ ರಿವಾಜುಗಳು ಯಾವುದೇ ವಿಧದಲ್ಲಿಯೂ ಜನಸಾಮಾನ್ಯರ ಜಾಯಮಾನಕ್ಕೆ ಒಗ್ಗದಂತಿದ್ದ ಈ ಎರಡು ಜೋಡಿಗಳು ನಟ ನಟಿಯರೇ ಬೆರಗಾಗುವಂತೆ ಉತ್ತರಿಸಿದರು. ಅವರಿಗೆ ಗೊತ್ತಿಲ್ಲದ ಮತ್ತು ಬೇಕಿಲ್ಲದ ಸರಕುಗಳೇ ಇರಲಿಲ್ಲ. 'ಅಬ್ರಕಡಬ್ರ'ದಂಥ ಮಾಲ್ ಸಹ ಅವರಿಗೆ ಚಿಕ್ಕದೆನಿಸುವಂತಿತ್ತು. 3ನೆಯ ಜೋಡಿಯಂತೂ ಗೆಲ್ಲಲಿರುವ ದುಡ್ಡನ್ನೆಲ್ಲ ಅಬ್ರಕಡಬ್ರದಲ್ಲಿಯೇ ಖರ್ಚು ಮಾಡುವುದಾಗಿ ಆಣೆ ಮಾಡಿ ಹೇಳಿತು.

ಇಲ್ಲಿಗೆ ಒಂದು ಗಂಟೆಯಾಗಿ ಪ್ರಶ್ನೋತ್ತರ ಮುಗಿಯಬೇಕಾಗಿತ್ತು. ಆದರೆ 2 ಮತ್ತು 3ನೆಯ ಜೋಡಿ ಚಕಾಚಕ್ ಉತ್ತರಿಸಿ ಸಮಯ ಉಳಿಸಿಕೊಟ್ಟಿದ್ದರು. ಆದುದರಿಂದ 4ನೆಯ ಜೋಡಿಯನ್ನು ಕಂಪ್ಯೂಟರ್ ಆರಿಸಿದಾಗ ನಟ ನಟಿಯರಷ್ಟೇ ಅಲ್ಲ ಇಡೀ ಸಭಾಂಗಣವೇ ನಂಬಲಾಗದೆ ಸ್ತಂಭೀಭೂತವಾಯಿತು. ಆಯ್ಕೆಯಾದದ್ದು ಹುಚ್ಚಯ್ಯ ಮತ್ತು ಸುಂಕ್ಲಮ್ಮರ ಜೋಡಿಯಾಗಿತ್ತು. ಶ್ರೀಮಂತರ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದ ಅವರು ಬಡವರು ಮತ್ತು ನಿರಕ್ಷರಿಗಳಾಗಿದ್ದರು. ಮಾನ ಮರ್ಯಾದೆಗಂಜಿ ಬಾಳುತ್ತಿದ್ದ ಸಜ್ಜನರಾಗಿದ್ದರು. ಇರುವ ಇಬ್ಬರು ಮಕ್ಕಳನ್ನು ಓದಿಸಲು ಪಣ ತೊಟ್ಟು ಹೊಟ್ಟೆಬಟ್ಟೆ ಕಟ್ಟಿ ಜೀವನ ಸಾಗಿಸುತ್ತಿದ್ದರು. ಸಾಹುಕಾರರ ಮನೆಯ ಕಸಮುಸುರೆ, ಬಟ್ಟೆಬರೆ, ಮನೆ ಗಾರ್ಡನ್ನಿನ ನಿರ್ವಹಣೆ ಮಾಡುತ್ತ ದಿನವಿಡೀ ಅಲ್ಲೇ ಬಿದ್ದಿರುತ್ತಿದ್ದರು. ಅಲ್ಲದೆ ಅರ್ಧ ಗಂಟೆಗೊಮ್ಮೆ ಸುಂಕ್ಲಮ್ಮನು ಒಡತಿಯ ಮೇಕಪ್ಪು, ಡ್ರೆಸ್ಸು, ಸೀರೆಯ ಸೆರಗು ನೆರಿಗೆ, ಧರಿಸಿದ್ದ ಚಿನ್ನದ ವಜ್ರದ ಒಡವೆಗಳನ್ನು ಒಪ್ಪಓರಣ ಮಾಡುತ್ತಿರುತ್ತಿದ್ದಳು. ಸ್ಪರ್ಧೆಯ ದಿನವೂ ಮೇಕಪ್ಪಿನ ದೇಖರೇಖಿಗೆ ಸಾಹುಕಾರರು ಸುಂಕ್ಲಮ್ಮ, ಹುಚ್ಚಯ್ಯರನ್ನು ದಾಖಲಾತಿ ಒದಗಿಸಿ ನೋಂದಣಿ ಮಾಡಿಸಿ ಕರೆದುಕೊಂಡು ಹೋಗಿದ್ದರು. ನೋಂದಣಿ ಇಲ್ಲದೆ ಒಂದು ನರಪಿಳ್ಳೆಯೂ ಒಳಗೆ ಹೋಗುವಂತಿರಲಿಲ್ಲ. ಅವರಿಬ್ಬರೂ ಒಡೆಯರ ಬೂಟುಗಳ ಧೂಳನ್ನು ಒರೆಸುತ್ತಿದ್ದಾಗ ಅವರ ಹೆಸರು ಘೋಷಣೆಯಾಯಿತು. ಇದೆಷ್ಟು ಆಕಸ್ಮಿಕವಾಗಿತ್ತೆಂದರೆ ಎಲ್ಲರಿಗಿಂತ ಹೆಚ್ಚು ಆಶ್ಚರ್ಯವಾಗಿದ್ದು ಸುಂಕ್ಲಮ್ಮ ಮತ್ತು ಹುಚ್ಚಯ್ಯರಿಗೆ. ಅವರು ಯಾರು ಹೇಳಿದರೂ ವೇದಿಕೆ ಹತ್ತಲಿಲ್ಲ. ಹುಚ್ಚಯ್ಯ ಖಾಕಿ ಪ್ಯಾಂಟು, ಶರ್ಟು ಹಾಕಿಕೊಂಡಿದ್ದ ಮತ್ತು ಸುಂಕ್ಲಮ್ಮನು ಯಾರೋ ಕೊಟ್ಟಿದ್ದ ಕಡಿಮೆ ಗುಣಮಟ್ಟದ ನೀಲಿ ಬಣ್ಣದ ನೈಲಾನ್ ಸೀರೆ ಉಟ್ಟುಕೊಂಡಿದ್ದಳು. ಅವರಿಗೆ ಸತಿಪತಿ ಪ್ರೋಗ್ರಾಂ, ಅಲ್ಲಿನ ಪ್ರಶ್ನೋತ್ತರದ ಬಗ್ಗೆ ಅಲ್ಪಸ್ವಲ್ಪ ಗೊತ್ತಿತ್ತು. ಪುಗಸಟ್ಟೆಯಾಗಿ ಲಕ್ಷಾಂತರ ಕೋಟ್ಯಂತರ ರೂಪಾಯಿ ಕೊಡುವವರ ಬಗ್ಗೆ ಅವರಿಗೆ ಗುಮಾನಿಯಿತ್ತು. ಅದುವರೆಗಿನ ಪ್ರಶ್ನೋತ್ತರವನ್ನು ಅವರು ಗಮನವಿಟ್ಟು ನೋಡಿರಲಿಲ್ಲ. ಒಡೆಯರ ಮೇಕಪ್ಪನ್ನು ತಿದ್ದುವುದರಲ್ಲಿ ಮಗ್ನರಾಗಿದ್ದರು.

ಅಷ್ಟರಲ್ಲಿ ಮಾಲ್‌ನ ಸಿಬ್ಬಂದಿ ಬಂದು ಹುಚ್ಚಯ್ಯ, ಸುಂಕ್ಲಮ್ಮರನ್ನು ವೇದಿಕೆಗೆ ಕರೆದುಕೊಂಡು ಹೋದರು. ಅವರ ಒಡೆಯರಿಗೆ ಹೊಟ್ಟೆಯಲ್ಲಿ ಕಾರದ ಪುಡಿ ಕಲಿಸಿದಂತಾಯ್ತು. ಆಳುಗಳನ್ನು ಯಾಕಾದರೂ ಕರೆದುಕೊಂಡು ಬಂದೆವೋ ಎಂದು

